ಎಣಜಿ ಹಾಗೂ ಎನ್‌ಜಿಇಎಫ್ ನಡುವಣ ಒಪ್ಪಂದದ ಬಗ್ಗೆ

೬೮೩. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಾರತದಲ್ಲಿ ಎಣಜಿ ಉತ್ಪನ್ನಗಳ ಮಾರಾಟ ಕುರಿತಂತೆ ಎನ್‌ಜಿಇಎಫ್ ಬೆಂಗಳೂರು ಮತ್ತು ಎಣಜಿ ಪಶ್ಚಿಮ ಜರ್ಮನಿಯ ನಡುವೆ ಯಾವುದಾದರೂ ಒಪ್ಪಂದವಿದೆಯೇ ?

ಆ) ಹಾಗಿದ್ದಲ್ಲಿ ಒಪ್ಪಂದದ ನಿಬಂಧನೆಗಳು ಮತ್ತು ಷರತ್ತುಗಳು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು).—

ಅ) ಹೌದು

ಆ) ಭಾರತದ ಕೇಂದ್ರಾಡಳಿತ ಪ್ರದೇಶದಲ್ಲಿ ಒಪ್ಪಂದದ, ಉತ್ಪನ್ನಗಳ ಮಾರಾಟದ ಮೇಲೆ ಕಮಿಷನ್ ಪಡೆದುಕೊಳ್ಳಲು ಏಜೆನ್ಸಿ ಒಪ್ಪಂದವು ಎನ್‌ಜಿಎಫ್‌ಗೆ ಅಧಿಕಾರ ನೀಡಿದೆ. ಎನ್‌ಜಿಎಫ್‌ನ ಮಧ್ಯವರ್ತಿತ್ವದ ಮೂಲಕ ಎಣಜಿಯು ಮಾಡಿದ ಮಾರಾಟಗಳಿಗೆ ಸಂಬಂಧಿಸಿದಂತೆ ಎನ್‌ಜಿಇಎಫ್‌ಗೆ ಸಂದಾಯ ಮಾಡಬೇಕಾಗಿರುವ ಕಮಿಷನ್ ಈ ರೀತಿ ಇದೆ

೧. ಡಿಎಂ ೨೦ ಲಕ್ಷಗಳ ಎಫ್ ಒಬಿ ಮೌಲ್ಯದವರೆಗಿನ ಎಲ್ಲಾ ಪ್ರತಿಯೊಂದು ಆದೇಶಗಳಿಗೆ–ಶೇ.೫

೨. ಡಿಎಂ ೫೫ ಲಕ್ಷಗಳ ಎಫ್‌ಒಬಿ ಮೌಲ್ಯದವರೆಗಿನ ಎಲ್ಲಾ ಪ್ರತಿಯೊಂದು ಆದೇಶಗಳಿಗೆ ಡಿಎಂ ೨೦ ಲಕ್ಷಗಳವರೆಗಿನ ಮೊದಲ ಸ್ಲ್ಯಾಬ್ ಮೇಲೆ ಶೇ. ೫ ಮತ್ತು ಉಳಿದ ಬಾಕಿ ಮೊಬಲಗಿನ ಮೇಲೆ ಶೇ. ೩

೩. ಡಿಎಂ ೫೫ ಲಕ್ಷಗಳ ಎಫ್‌ಒಬಿ ಮೌಲ್ಯ ಮೀರಿದ ಎಲ್ಲಾ ಪ್ರತಿಯೊಂದು ಆದೇಶಗಳ ಮೇಲೆ ಶೇ. ೫ ಡಿಎಂ ೨೦ ಲಕ್ಷಗಳದರೆಗಿನ ಪ್ರಥಮ ಸ್ಲ್ಯಾಬ್‌ನ ಮೇಲೆ ಶೇ. ೩ ಡಿಎಂ ೫೫ ಲಕ್ಷಗಳವರೆಗಿನ ಬಾಕಿ ಮೊಬಲಗಿನ ಮೇಲೆ ಮತ್ತು ಶೇ. ೨ ಉಳಿದ ಬಾಕಿಮೊಬಲಗಿನ ಮೇಲೆ.

ಎನ್‌ಜಿಇಎಫ್‌ನ ಸಹಾಯವಿಲ್ಲದೆ ಏಜೆನ್ಸಿಯು ಆಡಳಿತ ಪ್ರದೇಶದಲ್ಲಿ ಖರೀದಿದಾರರಿಗೆ ವಸ್ತುಗಳನ್ನು ಸರಬರಾಜು ಮಾಡಿದಲ್ಲಿ ಶೇ. ೨ ರ ಗರಿಷ್ಠ ದರದಲ್ಲಿ ಕಮಿಷನ್ ಪಡೆದುಕೊಳ್ಳಲು ಸಹ ಏಜೆನ್ಸಿ ಒಪ್ಪಂದದ ಪ್ರಕಾರ ಎನ್‌ಜಿಇಎಫ್‌ಗೆ ಹಕ್ಕಿದೆ ಆದರೂ ಸಹ ಇಂತಹ ಸಂದರ್ಭಗಳಲ್ಲಿ ಸಂದಾಯ ಮಾಡಬೇಕಾದ ಕಮಿಷನ್ ದರವು ನಿರ್ದಿಷ್ಟ ಸಂದರ್ಭದ ಯೋಗ್ಯತಾನುಸಾರ ಎಣಜಿ ನಿಗಧಿಪಡಿಸಬಹುದೆಂದು ಒಪ್ಪಂದವು ತಿಳಿಸುತ್ತದೆ. ಒಪ್ಪಂದವು ಇತರ ಅನೇಕ ನಿಬಂಧನೆಗಳು ಮತ್ತು ಷರತ್ತುಗಳನ್ನು ಕೂಡಾ ಒಳಗೊಂಡಿದೆ.

ಕೆ.ಇ.ಬಿ.ಗೆ ಬರಬೇಕಾಗಿರುವ ಬಾಕಿಯ ಬಗ್ಗೆ

೬೮೮. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಂಡಳಿಗೆ ೧-೧-೧೯೯೦ರಲ್ಲಿರುವಂತೆ ಎಲ್ಲಾ ಗ್ರಾಹಕರಿಂದಲೂ ಬರಬೇಕಾಗಿರುವ ಬಾಕಿ ಮೊತ್ತವೆಷ್ಟು ?

ಆ) ಸ್ಥಳೀಯ ಸಂಸ್ಥೆಗಳಿಂದ, ರೈತರುಗಳಿಂದ, ಕೈಗಾರಿಕೆಗಳಿಂದ ಮತ್ತು ವಾಣಿಜ್ಯೇತರ ಗ್ರಾಹಕರುಗಳಿಂದ ಬರಬೇಕಾಗಿರುವ ಮೊತ್ತವೆಷ್ಟು ?

ಇ) ರೂ. ೫೦ ಲಕ್ಷಕ್ಕೂ ಮೀರಿ ಮಂಡಳಿಗೆ ಬಾಕಿ ಕೊಡಬೇಕಾಗಿರುವ ಗ್ರಾಹಕರುಗಳ ಹೆಸರುಗಳು (ಸಂಗ್ರಹವಾದ ಮಾಹಿತಿಯನ್ನು ಒದಗಿಸುವುದು).

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು)

ಅ) ದಿನಾಂಕ: ೧-೧-೧೯೯೦ರಲ್ಲಿರುವಂತೆ ಎಲ್ಲಾ ವರ್ಗದ ಗ್ರಾಹಕರುಗಳಿಂದ ಕೆ.ಇ.ಬಿ.ಗೆ ಸುಮಾರು ೪೬೩ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿತ್ತು.

ಅ) ದಿನಾಂಕ; ೧-೧-೧೯೯೦ರಂದು ಪ್ರತಿಯೊಂದು ವರ್ಗದ ಗ್ರಾಹಕರುಗಳಿಂದ ಕ.ಇ.ಬಿ.ಗೆ ಬರಬೇಕಾದ ಬಾಕಿಯನ್ನು ಸಂಕಲನ ಮಾಡಬೇಕಾಗಿದೆ. ಅದಾಗ್ಯೂ ದಿನಾಂಕ: ೩೦-೯-೧೯೮೯ರಲ್ಲಿ ರುವಂತೆ ಈ ಕೆಳಗಿನ ವರ್ಗದ ಗ್ರಾಹಕರುಗಳಿಂದ ಈ ಕೆಳಕಂಡ ಹಣ ಬಾಕಿ ಇತ್ತು

೧) ಸ್ಥಳೀಯ ಸಂಸ್ಥೆಗಳಿಂದ ೪೨ ಕೋಟಿ ರೂಪಾಯಿಗಳು

೨) ರೈತರುಗಳಿಂದ (ನೀರಾವರಿ ಪಂಪುಸೆಟುಗಳಿಂದ) ೩೪.೦೮ ಕೋಟಿ ರೂಪಾಯಿಗಳು

೩) ಕೈಗಾರಿಕೆಗಳು ಮತ್ತು ವಾಣಿಜ್ಯೇತರ ಉದ್ದಿಮೆಗಳಿಂದ ೨೯೩.೫೨ ಕೋಟಿ ರೂಪಾಯಿಗಳು

ಇ) ಕ.ಇ.ಬಿ.ಗೆ ೫೦ ಲಕ್ಷ ರೂಪಾಯಿಗಳಿಗೂ ಮೀರಿ ಬಾಕಿ ಕೊಡಬೇಕಾಗಿರುವ ಗ್ರಾಹಕರು ಗಳಹೆಸರುಗಳನ್ನು ಅನುಬಂದದಲ್ಲಿ ನೀಡಲಾಗಿದೆ.

STATEMENT SHOWING THE NAMES OF CONSUMERS WHO OWE MORE THAN Rs.50 LAKHS TO K. E. B. (AS ON 30-9-1989) ANNEXURE TO LAQ-680 BY SRI C. BYREGOWDA. MLA.,

1	HT. 26	M/s. Wheel and Axle Plant, Yelahanka	2,12,42,891-50
2	KHTP-1	M/s. K.I.O.C L. Malleswaram	46,08,61 983-80
3	HT-45	M/s. K. I. O. C. L. Panambur	16,95,13,129-38
4	BCHT-1	The General Manager, VISL, Bhadravathi	165,07 41,567-40
5	BCHT-2	The General Manager, M. P. M., Bhadravathi	6,18,36,137-81
6	HT-3	Mahadev Textile Mills, Hubli	1 41,03,941-20
7	AHT-2	M/s. Mysore Cements Ltd., Ammasandra	1,10,02.910-30
8	DHT-1	The Managing Director, D.C. Mill. Davanagere	50.47.308-70
9	HT-1	M/s. Dandeli Steel and Fero Alloys (P) Ltd.,	1,69.98,063-40
0	GPBHT-3	The Manager Hukkeri Society Hukkeri	2,00.12,645-24
11	HTS-5	M/s. Indal Belgaum	2,14,35,299-55
12	HTS-5	-,,-	1,84,77,616-53
13	HT-17	K.R. Mills	84 06,525-68
14	HT-7	M/s. Mangalore Chemical and Fertilizers Ltd.,	1,96,05,069-62
15	SHBD-2	M/s. A C. C. Shahabad	50.29,362-65
16	VHT-2	M/s. S M. and I. O. Ltd.,	4.65,72,733-50
17	VHT-3	-,,-	6,91,44.848 70
18	MHT-14	M/s. Tungabhadra Fibres Ltd.,	2,11 11,522-60
		Total	264,11 43,557-56